Civil Mis 2/2019
ಪಿ ಡಬ್ಲ್ಯೂ-1

**ಸಾಕ್ಷಿಯನ್ನು ದಿನಾಂಕ 20-01-2026 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**

**<u>ಪಾಟೀ ಸವಾಲು- 5 ನೇ ಎದುರುದಾರರ ಪರ ಶ್ರೀ ಡಿ ಜಿ ಟಿ ವಕೀಲರಿಂದಃ</u>**

ನಾನು 7 ನೇ ತಗರತಿ ವಿದ್ಯಾಭಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು ಸುಮಾರು 10 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದೇನೆ. ನಾನು ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದೇನೆಂದು ತೋರಿಸುವ ಸಲುವಾಗಿ ನನ್ನ ಬಳಿ ದಾಖಲೆಗಳು ಇವೆ. ಈ ಅರ್ಜಿ ಹಾಗೂ ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ನನ್ನ ವಿಳಾಸ ಹುಲಿಕುಂಟೆ ಎಂದು ಕಾಣಿಸಿರುತ್ತೇನೆ, ಬೆಂಗಳೂರಿನ ವಿಳಾಸವನ್ನು ಕಾಣಿಸಿರುವುದಿಲ್ಲ. OS 264/14 ರ ದಾವೆಯಲ್ಲಿ ನನ್ನ ವಿಳಾಸ ಹುಲಿಕುಂಟೆ ಎಂದು ಬರೆಸಿರುತ್ತೇನೆ. OS 264/14 ದಾವೆ ಸಲ್ಲಿಸುವ ಸಮಯದಲ್ಲಿ ನಾನು ತುಮಕೂರಿನಲ್ಲಿ ವಾಸ ಮಾಡುತ್ತಿದ್ದೆ, ತುಮಕೂರಿನಲ್ಲಿ ಸುಮಾರು 5-6 ವರ್ಷಗಳ ಕಾಲ ವಾಸ ಇದ್ದೆ. OS 264/14 ರ ದಾವೆಯಲ್ಲಿ ನಮ್ಮ ಪರವಾಗಿ ವಕಾಲತ್ತು ಸಲ್ಲಿಸಿದ್ದ ವಕೀಲರ ಹೆಸರು ಈಗ ನನಗೆ ನೆನಪಿಲ್ಲ. ನಾನು ಸದರಿ ದಾವೆಯನ್ನು ಯಾವ ವಕೀಲರಿಗೆ ನೀಡಿರುತ್ತೇನೆಂದು ಈಗ ನನಗೆ ನೆನಪಿಲ್ಲ. OS 264/14 ರ ದಾವೆಯಲ್ಲಿ ನಮ್ಮ ಪರವಾಗಿ ಹಾಜರಾಗಿದ್ದ ವಕೀಲರನ್ನು ಒಂದು ಬಾರಿ ಭೇಟಿ ಆಗಿದ್ದು ನಂತರ ಮುಂದಿನ ಮುದ್ದತ್ತ ದಿನಾಂಕವನ್ನು ನೀಡುತ್ತೇನೆಂದು ನಮ್ಮ ವಕೀಲರು ನನಗೆ ಹೇಳಿದ್ದು ನಂತರ ನಾನು ನಮ್ಮ ವಕೀಲರಿಗೆ ಭೆಟಿ ಆಗಿರುವುದಿಲ್ಲ. ನಾನು ಆ ರೀತಿ ನಮ್ಮ ವಕೀಲರನ್ನು ದಾವಾ ಸಲ್ಲಿಸುವ ವಿಚಾರವಾಗಿ ಭೇಟಿ ಆಗಿದ್ದೆ. ನಾನು ಬೆಂಗಳೂರಿನಲ್ಲಿ ವಾಸ ಮಾಡಲು ಪ್ರಾರಂಭಿಸಿದ ನಂತರ ವರ್ಷಕ್ಕೆ 2 ಬಾರಿ ನಮ್ಮಗ್ರಾಮಕ್ಕೆ ಬಂದು ಹೋಗುತ್ತಿದ್ದೆ. ಆ ಸಮಯದಲ್ಲಿ ನಮ್ಮ ಕುಟುಂಬದ ವ್ಯವಹಾರಗಳ ಬಗ್ಗೆ ನನ್ನ ಹಿರಿಯರು ನೋಡಿಕೊಳ್ಳುತ್ತಿದ್ದರು. ಆ ಸಮಯದಲ್ಲಿ ನನ್ನ ತಂದೆಯೇ ನ್ಯಾಯಾಲಯ, ಕಛೇರಿ ಹಾಗೂ ಪತ್ರದ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ಪರವಾಗಿ ನನ್ನ ತಂದೆ ದಾವೆ ಸಲ್ಲಿಸುತ್ತಿರುವ ಬಗ್ಗೆ ನನಗೆ ತಿಳಿಸಿರುವುದಿಲ್ಲ.

2. OS 264/14 ರ ದಾವೆಯನ್ನು ನಾನೇ ನೋಡಿಕೊಳ್ಳುತ್ತಿದ್ದ ಕಾರಣ ನನ್ನ ತಂದೆಯಿಂದ ಸದರಿ ದಾವೆಗೆ ಸಂಬಂಧಿಸಿದಂತೆ ಮಾಹಿತಿಯನ್ನು ನಾನು ಪಡೆದುಕೊಳ್ಳುತ್ತಿರಲಿಲ್ಲ. ನಮ್ಮ ವಕೀಲರು ದಾವೆಯನ್ನು ಸಲ್ಲಿಸಿದ ನಂತರ ನನ್ನ ಹಾಜರಾತಿ ನ್ಯಾಯಾಲಯಕ್ಕೆ ಅವಶ್ಯಕತೆ ಇದ್ದರೆ ದೂರವಾಣಿ ಕರೆ ಮಾಡಿ ತಿಳಿಸಿದಾಗ ಹಾಜರಾಗುವಂತೆ ತಿಳಿಸಿದ್ದು ಆದರೆ ನಮ್ಮ ವಕೀಲರು ನನಗೆ ಆ ಕೇಸಿನ ಬಗ್ಗೆ ಕರೆ ಮಾಡಿ ತಿಳಿಸಿರುವುದಿಲ್ಲ. ನಮ್ಮ ವಕೀಲರು ನನ್ನ ದೂರವಾಣಿ ಸಂಖ್ಯೆಯನ್ನು ನನ್ನಿಂದ ಪಡೆದುಕೊಂಡಿದ್ದರು ಆದರೆ ನಾನು ನಮ್ಮ

ವಕೀಲರ ಮೊಬೈಲ್ ಸಂಖ್ಯೆಯನ್ನು ಪಡೆದುಕೊಂಡಿರುವುದಿಲ್ಲ. ದಿಃ 10.07.2015 ರಿಂದ 24.04.2017 ರ ನಡುವೆ ನಾನು ಎರಡು ಬಾರಿ ನನ್ನ ಗ್ರಾಮಕ್ಕೆ ಬಂದಿದ್ದೆ. ಆ ಸಮಯದಲ್ಲಿ ನಮ್ಮ ವಕೀಲರನ್ನು ಭೇಟಿ ಆಗಿರುವುದಿಲ್ಲ. 2017 ನೇ ಸಾಲಿನಲ್ಲಿ OS 264/14 ರ ದಾವೆಯ ಬಗ್ಗೆ ತಿಳಿದುಕೊಂಡಿರಲಿಲ್ಲ. OS 264/14 ರ ದಾವೆಯು ವಜಾಗೊಂಡಿರುವ ಬಗ್ಗೆ ನನಗೆ 2018 ನವೆಂಬರ್ ತಿಂಗಳಲ್ಲಿ E-court APP ನ್ನು ಪರಿಶೀಲನೆ ಮಾಡಿದಾಗ ಗೊತ್ತಾಗಿರುತ್ತದೆ. OS 264/14 ರ ದಾವೆಯನ್ನು ಸಲ್ಲಿಸಿದ ವಕೀಲರನ್ನು ನಾನು ಭೇಟಿ ಆಗಿರುವುದಿಲ್ಲ. ಕೊರಟಗೆರೆಯ ಟಿ ಕೃಷ್ಣಮೂರ್ತಿ ವಕೀಲರಿಗೆ OS 264/14 ರ ದಾವೆಯ ಮಾಹಿತಿಯನ್ನು ನೀಡಿರುವುದಿಲ್ಲ. ನಾನು ಬೆಂಗಳೂರಿನಲ್ಲಿ ವಾಸ ಮಾಡುತ್ತಿರುವುದಿಲ್ಲ, ಹುಲಿಕುಂಟೆ ಗ್ರಾಮದಲ್ಲಿ ವಾಸ ಮಾಡುತ್ತಿರುತ್ತೇನೆ, ನನಗೆ OS 264/14 ರ ದಾವೆಯನ್ನು ನಡೆಸಲು ಹಿತಾಸಕ್ತಿ ಇಲ್ಲದೆ ಇರುವ ಕಾರಣ ಸದರಿ ದಾವೆಯನ್ನು ನಮ್ಮ ವಕೀಲರ ಮೂಲಕ ವಜಾ ಮಾಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. 5 ನೇ ಪ್ರತಿವಾದಿ ದಾವಾ ಆಸ್ತಿಯನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಿದ್ದು, ಅದನ್ನು ತಿಳಿದುಕೊಂಡು ನಾನು 5 ನೇ ಪ್ರತಿವಾದಿಗೆ ತೊಂದರೆ ನೀಡುವ ಸಲುವಾಗಿ ಈ ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಈ ಅರ್ಜಿಯನ್ನು ಸಲ್ಲಿಸಲು ಸಕಾರಣಗಳು ಇರುವುದಿಲ್ಲ ಎಂದರೆ ಸರಿಯಲ್ಲ. OS 264/14 ರ ದಾವೆಯ ಬಗ್ಗೆ ನನಗೆ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

**ಸಿ.ಜೆ. ಮತ್ತು ಪ್ರ.ದ.ನ್ಯಾದಂ.**
**ಕೊರಟಗೆರೆ**

Civil Mis 2/2019

ಪಿ ಡಬ್ಲ್ಯೂ-1

Plaintiff No.1 present, filed his affidavit in lieu of chief examination and examined as PW-1 got marked Ex.P. 1 to 22.

Sri. MLS prays time.

Further chief of PW 1 by: 25.02.2026.

Civil Judge and JMFC.

*Koratagere.*